# OCTOBER 08, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ನಡೆಸಿದ, ಪ್ರಥಮ ರಾಜ್ಯ ಕರ್ನಾಟಕ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಜನೋತ್ಸವವಾಗಿ, 23 ರಿಂದ 25ನೇ ತಾರೀಖಿನ ವರೆಗೆ, 'ಕಿತ್ತೂರು ಉತ್ಸವ' – ಬಾಬಾಸಾಹೇಬ ಪಾಟೀಲ.
- ರಾಷ್ಟ್ರೀಯ ವಸ್ತ್ರ ಖಾದಿ ಬಗ್ಗೆ, ಯುವ ಜನತೆ ಒಲವು ಮೈಗೂಡಿಸಿಕೊಳ್ಳಬೇಕು – ಬಸನಗೌಡ ತುರ್ವಿಹಾಳ.
- ಯಲಹಂಕದ ಅರಣ್ಯದಲ್ಲಿ, 'ಸಾಲು ಮರದ ತಿಮ್ಮಕ್ಕ ಸಸ್ಯೋದ್ಯಾನ' — ಈಶ್ವರ ಖಂಡ್ರೆ.

<><><>

ಈಗ ವಾರ್ತೆಗಳ ವಿವರ

<><><>

ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು, ನಡೆಸಿದ ದೇಶದಲ್ಲೇ ಪ್ರಥಮ ರಾಜ್ಯ ಕರ್ನಾಟಕ. ಬರುವ 18 ರಂದು, ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ವಿಧಾನಸೌಧದಲ್ಲಿ, ಹಿಂದುಳಿದ ವರ್ಗಗಳ ಸಚಿವರು ಹಾಗೂ ಶಾಸಕರ ಸಭೆ ನಡೆಸಿದ ಅವರು, ಹಲವು ಮಹತ್ವದ ವಿಚಾರಗಳ ಕುರಿತು ಚರ್ಚಿಸಿದರು. ಎಚ್.ಕಾಂತರಾಜು ಅಧ್ಯಕ್ಷತೆಯ ಆಯೋಗ, ಸಾಕ ್ಟ ಸಮಯ ತೆಗೆದುಕೊಂಡು ಸಮೀಕ್ಷೆ ನಡೆಸಿದೆ. ಕಾಂತರಾಜು ಅವರ ಅಧ್ಯಕ್ಷಾವಧಿ ಪೂರ್ಣಗೊಂಡ ನಂತರ, ಜಯಪ್ರಕಾಶ್ ಹೆಗ್ಗಡೆಯವರು ಆಯೋಗದ ಅಧ್ಯಕ್ಷರಾದರು. ಸಮಗ್ರ ವರದಿ ಸರ್ಕಾರದ ಕೈ ಸೇರಿದ್ದು, ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು ಎಂದು, ಮುಖ್ಯಮಂತ್ರಿ ಹೇಳಿದರು.

<><><>

ಬ್ರಿಟಿಷರ ವಿರುದ್ಧದ, ಕಿತ್ತೂರು ಚನ್ನಮ್ಮನವರ ವೀರೋಚಿತ ಹೋರಾಟ ಹಾಗೂ ಗೆಲವಿನ, ದ್ವಿ ಶತಮಾನೋತ್ಸವ ಸಂಭ್ರಮ, ಬೆಳಗಾವಿ ಜಿಲ್ಲೆ ಕಿತ್ತೂರಿನಲ್ಲಿ ಈ ತಿಂಗಳ 23 ರಿಂದ 25ನೇ ತಾರೀಖಿನ ವರೆಗೆ ನಡೆಯಲಿದೆ.

ಬೈಲಹೊಂಗಲದ ಉಪ ವಿಭಾಗಾಧಿಕಾರಿ ಕಚೇರಿಯಲ್ಲಿ ಜರುಗಿದ, 'ಕಿತ್ತೂರು ಉತ್ಸವ–2024' ಪೂರ್ವಭಾವಿ ಸಭೆಯ, ಅಧ್ಯಕ್ಷತೆ ವಹಿಸಿ ಮಾತನಾಡಿದ, ಚನ್ನಮ್ಮನ ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ, ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಿ, ವಿಜೃಂಭಣೆಯ ಜನೋತ್ಸವವಾಗಿ ಆಚರಿಸಲು, ಸಿದ್ಧತೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

<><><>

ಎಲ್ಲರೂ ಖಾದಿ ಉಡುಪು ಧರಿಸಿ, ಖಾದಿ ಗ್ರಾಮೋದ್ಯೋಗ ಮತ್ತು ಖಾದಿ ಕಾರ್ಯಕರ್ತರ ಕೈ ಬಲ ಪಡಿಸಬೇಕು ಎಂದು, ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಹಾಗೂ ಮಸ್ಕಿ ಶಾಸಕ ಬಸನಗೌಡ ತುರ್ವಿಹಾಳ ಕೋರಿದ್ದಾರೆ. ರಾಯಚೂರಿನ ವೀರಶೈವ ಕಲ್ಯಾಣ ಮಂಟಪದಲ್ಲಿ, 15 ದಿನಗಳ ಕಾಲ ಆಯೋಜಿತ, ಖಾದಿ ಗ್ರಾಮೋದ್ಯೋಗ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಉದ್ಘಾಟಿಸಿ, ಅವರು ಮಾತನಾಡಿದರು. ಸ್ವಾತಂತ್ರ್ಯ ಪೂರ್ವದಿಂದಲೂ, ಮಹಾತ್ಮ ಗಾಂಧಿಯವರು, ಸ್ವತಃ ಖಾದಿ ನೇಯ್ದು ಮತ್ತು ಬಳಕೆ ಮಾಡಿ, ಖಾದಿಯನ್ನು ರಾಷ್ಟ್ರೀಯ ವಸ್ತ್ರವಾಗಿ ಸಾರಿದರು. ಗ್ರಾಮೀಣ ಪ್ರದೇಶದ ಗುಡಿ ಕೈಗಾರಿಕೆಗಳ ಸ್ಥಾಪನೆಗೆ ಪ್ರೇರಣೆ ನೀಡಿದರು. ಖಾದಿ ವಸ್ತ್ರದ ಒಲವನ್ನು ಯುವ ಜನತೆ ಮೈಗೂಡಿಸಿಕೊಳ್ಳಬೇಕು ಎಂದರು.

<><><>

ವನ್ಯ ಮೃಗಗಳ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಮುಂದಿನ ಪೀಳಿಗೆಗೆ ವನ್ಯ ಮೃಗಗಳ ಮಹತ್ವ ತಿಳಿಸಲು, ವನ್ಯಜೀವಿ ಸಪ್ತಾಹ ಆಚರಿಸಲಾಗುತ್ತಿದೆ ಎಂದು ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ, 70ನೇ ವನ್ಯಜೀವಿ ಸಪ್ತಾಹದ ಸಮಾರೋಪದಲ್ಲಿ, ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪ್ರದಾನ ಮಾಡಿ, ಮಾತನಾಡಿದರು. ಯಲಹಂಕದ 153 ಎಕರೆ ಅರಣ್ಯ ಪ್ರದೇಶದಲ್ಲಿ, ಕಬ್ಬನ್ ಪಾರ್ಕ್ ಮಾದರಿಯಲ್ಲಿ 'ಸಾಲು ಮರದ ತಿಮ್ಮಕ್ಕ ಸಸ್ಯೋದ್ಯಾನ'ಕ್ಕೆ ಶೀಘ್ರ ಶಂಕು ಸ್ಥಾಪನೆ ನೆರವೇರಿಸಲಾಗುವುದು ಎಂದರು.

<><><>

ಸರ್ಕಾರಿ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯಗಳಲ್ಲಿ, ನೀಟ್–ಜೆ.ಇ.ಇ. ಸ್ಪರ್ಧಾತ್ಮಕ ಪರೀಕ್ಷೆಗೆ ಅಣಿಗೊಳಿಸುವ, ಬೆಳಗಾವಿ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾದ, 'ಸಿಇಟಿ–ಸಕ್ಷಮ್' ಕಾರ್ಯಕ್ರಮ, ಇಡೀ ರಾಜ್ಯಕ್ಕೆ ಮಾದರಿಯಾಗಿದೆ ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ರಾಹುಲ್ ಶಿಂಧೆ ತಿಳಿಸಿದ್ದಾರೆ. 'ಸಿಇಟಿ–ಸಕ್ಷಮ್' ಕಾರ್ಯವಿಧಾನವನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಅಳವಡಿಸಿಕೊಳ್ಳಲು, ಪ್ರೊಬೆ 'ನರಿ ಐ.ಎ.ಎಸ್. ಅಧಿಕಾರಿ ದೃಷ್ಟಿ ಜೇಸ್ವಾಲ್ ನೇತೃತ್ವದ ತಂಡ, ಬೆಳಗಾವಿಗೆ ಭೇಟಿ ನೀಡಿ, ಜಿಲ್ಲಾಡಳಿತದಿಂದ ಮಾಹಿತಿ ಪಡೆದುಕೊಂಡಿದೆ ಎಂದು, ಅವರು ಹೇಳಿದರು.

<><><>

ಗದಗ ನಗರದ ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ, ಕಾನೂನು ಮಹಾವಿದ್ಯಾಲಯ, 'ವ್ಯಾಜ್ಯ ಮುಕ್ತ ಗ್ರಾಮ' ಜಾಗೃತಿ ಅಭಿಯಾನ ಆರಂಭಿಸಿದೆ. ಕಾನೂನು ಮಹಾವಿದ್ಯಾಲಯದ ಅಧ್ಯಕ್ಷ ಎಸ್.ಕೆ. ಪಾಟೀಲ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ಶ್ಯಾಬಳ, ಗೊಜನೂರು, ಕೊಂಡಿಕೊಪ್ಪ ಮತ್ತು ಸಂಕದಾಳ ಗ್ರಾಮಗಳನ್ನು ದತ್ತು ಪಡೆದಿದ್ದು, ಕಾನೂನು ಅರಿವು–ನೆರವು ಒದಗಿಸಲಾಗುತ್ತಿದೆ ಎಂದರು. ದತ್ತು ಪಡೆದ ನಾಲ್ಕು ಗ್ರಾಮಗಳಲ್ಲಿ, ಕಾನೂನು ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಪ್ರತಿ ಮನೆ–ಮನೆಗೂ ಹೋಗಿ, ಪ್ರಕರಣಗಳು ಬಾಕಿ ಇರುವ ಮಾಹಿತಿ ಸಂಗ್ರಹಿಸಿದ್ದು, ರಾಜೀ ಸಂಧಾನಕ್ಕೆ ಅರ್ಹವಿರುವ ಪ್ರಕರಣಗಳಲ್ಲಿ, ರಾಜೀ ಸಂಧಾನಕ್ಕೆ ಅನುವು ಮಾಡಲಾಗುತ್ತಿದೆ ಎಂದರು.

<><><>

'ತಂಬಾಕು ಮುಕ್ತ ಯುವ ಅಭಿಯಾನ'ವನ್ನು, ಧಾರವಾಡ ಜಿಲ್ಲೆಯಾದ್ಯಂತ, 60 ದಿನಗಳ ವರೆಗೆ ಆಚರಿಸಲಾಗುತ್ತಿದ್ದು, 160 ಶಾಲೆ ಹಾಗೂ 20 ಗ್ರಾಮಗಳನ್ನು ಸಂಪೂರ್ಣ ತಂಬಾಕು ಮುಕ್ತಗೊಳಿಸುವ ಗುರಿ ಹೊಂದಲಾಗಿದೆ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ. ತಂಬಾಕು ನಿಯಂತ್ರಣ ಕೋಶದ, ಜಿಲ್ಲಾ ಸಮನ್ವಯ ಸಮಿತಿಯ, ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು. ಧಾರವಾಡ ಜಿಲ್ಲೆಯಲ್ಲಿ, ಪ್ರಸಕ್ತ ವರ್ಷದಲ್ಲಿ ಈ ವರೆಗೆ 3 ಸಾವಿರದ 46 ನಾಯಿ ಕಡಿತದ ಪ್ರಕರಣಗಳು ದಾಖಲಾಗಿದೆ. ರೇಬಿಸ್ ಮುಕ್ತ ನಗರವನ್ನಾಗಿಸಲು ಕಟ್ಟುನಿಟ್ಟಿನ ಕ್ರಮ ಹಾಗೂ ರೇಬಿಸ್ ನಿರೋಧಕ ಲಸಿಕೆ ಹಾಕಿಸಿಕೊಳ್ಳುವಂತೆ, ಅವರು ಸೂಚಿಸಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಅಶ್ವಯುಜ ಮಾಸದ ಪಾಡ್ಯದಿಂದ ದಶಮಿ ವರೆಗೆ, 10 ದಿನ ಗೊಂಬೆಗಳ ಪ್ರತಿಷ್ಠಾಪನೆ, ದಸರಾ ಹಬ್ಬದ ಸಂಭ್ರಮದ ಭಾಗ. ಧಾರವಾಡದ ಹಳಿಯಾಳ ರಸ್ತೆಯ ಕೆ.ಐ.ಎ.ಡಿ.ಬಿ. ಬಡಾವಣೆ ನಿವಾಸಿ, ಚಂದ್ರಿಕಾ ಶೆಟ್ಟಿ ಅವರು, ಮೂರು ಸಾವಿರ ಗೊಂಬೆಗಳನ್ನು ಪ್ರತಿಷ್ಠಾಪಿಸಿದ್ದಾರೆ. ಈ ಬಾರಿ, ರಾವಣ ದರ್ಬಾರ್ ಪರಿಕಲ್ಪನೆಯಲ್ಲಿ ಚಂದ್ರಿಕಾ ಅವರು, 28ನೇ ವರ್ಷದ ಗೊಂಬೆ ದಸರಾ ಉತ್ಸವ ಆಯೋಜಿಸಿ, ಮಕ್ಕಳಿಗೆ ಕಥೆ ಹೇಳಿ, ಸಿಹಿ ವಿತರಿಸುವ ಮಾದರಿ ಕಾರ್ಯ ಕೈಗೊಂಡು, ಹಬ್ಬಕ್ಕೊಂದು ವಿಶೇಷ ಮೆರಗು ತಂದಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಚಂದ್ರಿಕಾ ಶೆಟ್ಟಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಚಂದ್ರಿಕಾ ಶೆಟ್ಟಿ ಧ್ವನಿ 35 ಸೆಕೆಂದುಗಳು

<><><>

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ, ಜಂಬೂ ಸವಾರಿ ಮೆರವಣಿಗೆಯಲ್ಲಿ, ನಿಶಾನೆ ಆನೆಯಾಗಿ ಈ ಬಾರಿ ಆನೆ ಧನಂಜಯ ಹಾಗೂ ನೌಪತ್ ಆನೆಯಾಗಿ ಗೋಪಿಯನ್ನು ಆಯ್ಕೆ ಮಾಡಲಾಗಿದೆ ಎಂದು, ಅರಣ್ಯಧಿಕಾರಿ ಐ.ಬಿ. ಪ್ರಭುಗೌಡ ಮಾಹಿತಿ ನೀಡಿದ್ದಾರೆ. ಚಿನ್ನದ ಅಂಬಾರಿ ಹೊರುವ ಅಭಿಮನ್ಯು, 5 ಸಾವಿರದ 8 ನೂರಾ 20 ಕಿಲೋ ತೂಕ ಹೊಂದಿದೆ. ಅಭಿಮನ್ಯುವಿನ ಎಡ ಬಲದಲ್ಲಿ, ಹಿರಣ್ಯ ಹಾಗೂ ಲಕ್ಷ್ಮೀ ಕುಮ್ಕಿ ಆನೆಗಳಾಗಿ ಭಾಗವಹಿಸಲಿವೆ. 14 ಆನೆಗಳ ಪೈಕಿ, ಜಂಬೂ ಸವಾರಿಯಲ್ಲಿ ಒಟ್ಟು 9 ಆನೆಗಳು ಭಾಗಿಯಾಗಲಿವೆ ಎಂದರು.

<><><>

ಮೈಸೂರು ದಸರಾ ಹಿನ್ನೆಲೆ, ಅರಮನೆಯ ಆವರಣದಲ್ಲಿ, ಯೋಗ ಸರಪಳಿ; ಪ್ರಜಾಪ್ರಭುತ್ವಕ್ಕಾಗಿ ಯೋಗ' ಧ್ಯೇಯದೊಂದಿಗೆ ಆಯೋಜಿತ, ಯೋಗ ಪ್ರದರ್ಶನದಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು.

<><><>

ಮೈಸೂರಿನ ಜೆ.ಎಸ್.ಎಸ್. ಕಾಲೇಜಿನ ಯೋಗ ಪಟು ಹಾಗೂ ಶಿಕ್ಷಕ, ನಿರಂಜನ ಮೂರ್ತಿ ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ನಿರಂಜನ ಮೂರ್ತಿ ಧ್ವನಿ 28 ಸೆಕೆಂದುಗಳು

<><><>

ಶರನ್ನವ ರಾತ್ರಿ ಹಿನ್ನೆಲೆ, ಧಾರವಾಡದ ರವಿವಾರ ಪೇಟೆಯ ಶ್ರೀ ಲಕ್ಷ್ಮೀ ನಾರಾಯಣ ಮಂದಿರದಲ್ಲಿ, ನಿನ್ನೆ ಸೋಮವಾರ ಲಲಿತಾ ಪಂಚಮಿ ಅಂಗವಾಗಿ, ಶಂಕರ ಪಾರ್ವತಿ ಅವತಾರವನ್ನು ತೊಡಿಸಿ, ಪೂಜಿಸಲಾಯಿತು. ಇಂದು ಮಂಗಳವಾರ ಷಷ್ಠಿ ತಿಥಿ ಹಿನ್ನೆಲೆ, ಶ್ರೀ ರಾಧಾ ಕೃಷ್ಣ ವೇಶ ತೊಡಿಸಿ, ಪೂಜಿಸಲಾಗಿದೆ.

<><><>

ನವರಾತ್ರಿಯ 6ನೇ ದಿನವಾದ ಇಂದು, ಧಾರವಾಡದ ಶಾಂತಿ ನಿಕೇತನ ನಗರದ ಶ್ರೀ ಕರಿಯಮ್ಮದೇವಿಗೆ ಅನ್ನಪೂರ್ಣೇಶ್ವರಿ ದೇವಿ ಅಲಂಕಾರ ತೊಡಿಸಿ, ಪೂಜಿಸಲಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ವಿಧಾನ ಪರಿ ‘ತ್‌ಗೆ, ದಕ್ಷಿಣಕನ್ನಡ ಸ್ಥಳೀಯ ಪ್ರಾಧಿಕಾರ ಕ್ಷೇತ್ರದ ಉಪಚುನಾವಣೆಗೆ, ನಾಲ್ಕು ಮಂದಿ ಅಭ್ಯರ್ಥಿಗಳು ಅಂತಿಮವಾಗಿ ಕಣದಲ್ಲಿದ್ದಾರೆ. ಇದೇ 21 ರಂದು ಚುನಾವಣೆ ನಿಗದಿಯಾಗಿದೆ.

<><><>

ಐತಿಹಾಸಿಕ ಕಿತ್ತೂರು ವಿಜಯದ, ದ್ವಿ ಶತಮಾನೋತ್ಸವದ ಅಂಗವಾಗಿ, ವಿಜಯ ಜ್ಯೋತಿ ರಥಯಾತ್ರೆ, ಶಿವಮೊಗ್ಗಕ್ಕೆ ಆಗಮಿಸಿದ ಹಿನ್ನೆಲೆ, ಶಾಸಕ ಎಸ್.ಎನ್.ಚನ್ನಬಸಪ್ಪ ಸ್ವಾಗತಿಸಿದರು.

<><><>

‘ಹೆಸರಾಯಿತು ಕರ್ನಾಟಕ; ಉಸಿರಾಗಲಿ ಕನ್ನಡ’ ಧ್ಯೇಯದ, ಕರ್ನಾಟಕ ನಾಮಕರಣ 50, ಕನ್ನಡ ಜ್ಯೋತಿ ರಥ ಯಾತ್ರೆ ಬಾಗಲಕೋಟೆ ತಲುಪಿದೆ. ಜಿಲ್ಲಾಧಿಕಾರಿ ಜಾನಕಿ ಕೆ.ಎಂ. ರಥಕ್ಕೆ ಗೌರವಾರ್ಪಿಸಿದರು.

<><><>

‘ಸಹಬಾಳ್ವೆಯೊಂದಿಗೆ ವನ್ಯಜೀವಿ ಸಂರಕ್ಷಣೆ’ ಧ್ಯೇಯದೊಂದಿಗೆ, ದಾವಣಗೆರೆ ಜಿಲ್ಲೆ ಜಗಳೂರಿನ, ರಂಗಯ್ಯನದುರ್ಗ ಕೊಂಡುಕುರಿ ವನ್ಯಜೀವಿ ವಲಯದಲ್ಲಿ, ವನ್ಯಜೀವಿ ಸಪ್ತಾಹದ ಅಂಗವಾಗಿ, ಜನ ಜಾಗ್ರತಿ ಜಾಥಾ ಜರುಗಿತು.

<><><>

ಮೈಸೂರು ದಸರಾ ಜಂಬೂ ಸವಾರಿಯ, ಸ್ತಬ್ಧ ಚಿತ್ರಗಳ ಮೆರವಣಿಗೆಗೆ, ಚಿಕ್ಕಬಳ್ಳಾಪುರ ಜಿಲ್ಲಾಡಳಿತ, ನಂದಿಗಿರಿ ಧಾಮದ, ರಾಜ್ಯದ ಪ್ರಥಮ ರೋಪ್ ವೇ ಪ್ರತಿಕೃತಿ ಸಿದ್ಧಪಡಿಸಿದೆ.

<><><>

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, ಇಂದು ಸಂಜೆ 6 ಗಂಟೆಗೆ, ‘ಕೃಷಿಯಲ್ಲಿ ನೀರಿನ ಸದ್ಬಳಕೆ’ ಕುರಿತು, ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಡಾಕ್ಟರ್ ಎಸ್.ಎಸ್. ಅಂಗಡಿ, ಉಪನ್ಯಾಸ ನೀಡಲಿದ್ದಾರೆ.

<><><>

‘ಶರಣ ಸಂಸ್ಕೃತಿ ಉತ್ಸವ’ದ ಅಂಗವಾಗಿ, ಚಿತ್ರದುರ್ಗ ಮುರುಘಾಮಠದಲ್ಲಿ ಸಹಜ ಶಿವಯೋಗ ಕಾರ್ಯಕ್ರಮವನ್ನು, ದಾವಣಗೆರೆ ವಿರಕ್ತಮಠದ ಬಸವಪ್ರಭು ಸ್ವಾಮೀಜಿ ನಡೆಸಿಕೊಟ್ಟರು.

<><><>

ಬೌದ್ಧ ಧರ್ಮೀಯರು, ಅಂಬೇಡ್ಕರ್ ಅನುಯಾಯಿಗಳು, ಇದೇ 14 ರಂದು, ಚಿಕ್ಕಬಳ್ಳಾಪುರದಲ್ಲಿ ಧಮ್ಮ ಚಕ್ರ ಪ್ರವರ್ತನೆಯ 68ನೇ ವರ್ಷಾಚರಣೆ ಆಯೋಜಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ನಡೆಸಿದ, ಪ್ರಥಮ ರಾಜ್ಯ ಕರ್ನಾಟಕ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಜನೋತ್ಸವವಾಗಿ, 23 ರಿಂದ 25ನೇ ತಾರೀಖಿನ ವರೆಗೆ, 'ಕಿತ್ತೂರು ಉತ್ಸವ' – ಬಾಬಾಸಾಹೇಬ ಪಾಟೀಲ.
- ರಾಷ್ಟ್ರೀಯ ವಸ್ತ್ರ ಖಾದಿ ಬಗ್ಗೆ, ಯುವ ಜನತೆ ಒಲವು ಮೈಗೂಡಿಸಿಕೊಳ್ಳಬೇಕು – ಬಸನಗೌಡ ತುರ್ವಿಹಾಳ.
- ಯಲಹಂಕದ ಅರಣ್ಯದಲ್ಲಿ, 'ಸಾಲು ಮರದ ತಿಮ್ಮಕ್ಕ ಸಸ್ಯೋದ್ಯಾನ' – ಈಶ್ವರ ಖಂಡ್ರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ